'ತಪ್ಪೇನಿಲ್ಲ ಅಭಿ, ನಿಜವಾಗಿಯೂ ಒಳ್ಳೆಯ ಭಾವನೆ' ಎಂದ ನರಹರಿ.

ನರಹರಿಯ ನಿರ್ದೇಶನದಂತೆ ಆಧುನಿಕವಾದ ಮನೆಯಲ್ಲಿ ಏನೆಲ್ಲಾ ಇರಬೇಕೋ ಅದೆಲ್ಲವನ್ನೂ ಇಂಜಿನಿಯರ್ ಮಹಾದೇವ ಮತ್ತು ಅವನ ಸಹಾಯಕ ರಾಘವೇಂದ್ರ ಜೋಡಿಸಿದ್ದರು. ಮಂಚ ಹಾಸಿಗೆ, ಹಾಸು ವಾರ್ಡ್‌ರೋಬ್, ಕಪಾಟುಗಳು, ಕಿಟಕಿಗಳಿಗೆ ಪರದೆ ಸೊಳ್ಳೆಯನ್ನು ದೂರವಿಡಲು ಬೆಳ್ಳಿಯಂತೆ ಹೊಳೆಯುವ ಲೋಹ ಪರದೆ ಎಲ್ಲವನ್ನೂ ಜೋಡಿಸಲಾಗಿತ್ತು. ಮನೆ ಒಂದು ಕಲಾಕೃತಿಯಂತೆ ಇತ್ತು.

'ಗೃಹಪ್ರವೇಶದ ನಂತರವೇ ಮನೆಯನ್ನು ಉಪಯೋಗಿಸಬೇಕು ಎಂಬ ಶಾಸ್ತ್ರವೇನೂ ನಮಗೆ ಇಲ್ಲ. ನೀವು ಇಲ್ಲೇ ಅಡುಗೆ ಮಾಡಿ ಊಟ ಮಾಡಬಹುದು. ರಾತ್ರಿ ಇಲ್ಲೇ ಮಲಗಿ. ಕೆಳಗಿನ ಕೋಣೆಗಳು ಯಾವಾಗಲೂ ಸ್ವಚ್ಛವಾಗಿರಲಿ. ಯಾಕೆಂದರೆ, ಮನೆಗೆ ಬಂದ ಅತಿಥಿಗಳನ್ನು ನಾವು ಕರೆದು ಕೂರಿಸುವುದು ಅಲ್ಲಿ' ಎಂದು ನರಹರಿ ಕೆಲಸದ ಆಳುಗಳಿಗೆ ಹೇಳಿದ್ದ.

ಹಿಂದಿನ ಬಾರಿ ಬಂದಾಗ ನರಹರಿ ಅಡುಗೆಗೆ ಗ್ಯಾಸ್ ಒಲೆಯ ಏರ್ಪಾಡು ಕೂಡ ಮಾಡಿದ್ದ. ಅಡುಗೆಯಾಳನ್ನು ಗೊತ್ತು ಮಾಡಿ ಎಲ್ಲರಿಗೂ ಒಂದೇ ಅಡಿಗೆ ಮಾಡಿಸಿ, 'ನೀವು ದಿನದ ಕೆಲಸ ಮುಗಿಸಿ ಎಲ್ಲೆಲ್ಲೋ ಮಲಗಬೇಡಿ. ಇಲ್ಲೇ ಮನೆಯೊಳಗೇ ಮಲಗಿ; ಮಹಡಿಯ ಕೋಣೆಗಳನ್ನು ನೀವು ಉಪಯೋಗಿಸಬಹುದು. ಇಡೀ ಮನೆಯ ಒಳ ಹೊರಗೆ ಯಾವಾಗಲೂ ಸ್ವಚ್ಛವಾಗಿರಬೇಕು' ಎಂದು ಹೇಳಿದ. ನರಹರಿ ಇಂಜಿನಿಯರ್ ಮಹಾದೇವ ಸಹಾಯಕ ರಾಘವೇಂದ್ರ ಮತ್ತು ಕೆಲಸದಾಳುಗಳ ಜೊತೆ ಊಟ ಮಾಡುತ್ತಿದ್ದ. ಕೆಳಗಿನ ಕೋಣೆಯಲ್ಲಿ ನರಹರಿ ಮಲಗುತ್ತಿದ್ದ. ಇಂಜಿನಿಯರ್ ಮಹಾದೇವ ಅವನ ಸಹಾಯಕ ರಘು ಮತ್ತು ಕೆಲಸದಾಳುಗಳೊಡನೆ ಎಲ್ಲರೂ ಸಮಾನ, ತಾನು ಅವರಂತೆಯೇ ಒಬ್ಬ ಎಂಬ ಭಾವನೆಯನ್ನು ನಡೆನುಡಿಯಲ್ಲಿ ವ್ಯಕ್ತಪಡಿಸುತ್ತಿದ್ದ. ಎಲ್ಲರನ್ನೂ ಪ್ರೀತಿಯಿಂದ ಮಾತಾಡಿಸುತ್ತಿದ್ದ.

ಅಭಿ ಮತ್ತು ಸುಕೃತಿಗೆ ಮನೆ ಬಹಳ ಇಷ್ಟವಾಯಿತು. ಮನೆಯಷ್ಟೇ ಅಲ್ಲ, ಮನೆಯ ಮುಂದಿನ ತೋಟ, ಸುತ್ತ ಹಸಿರು ಮರಗಳು ಎಲ್ಲವೂ ಇಷ್ಟವಾಯಿತು. ಆದರೆ ಕೇವಲ ಮನೆಯ ಅಂದ ಚೆಂದ ನೋಡಿ ಇರಲಿಕ್ಕಾಗುವುದಿಲ್ಲವಲ್ಲ? ಎಂದು ಪಿಸುಗುಟ್ಟಿದಳು ಸುಕೃತಿ ಅಣ್ಣನ ಕಿವಿಯಲ್ಲಿ. ಅವನು ಏನೂ ಹೇಳಲಿಲ್ಲ.

11

ಅಮೆರಿಕೆಯಿಂದ ಹೊರಡುವಾಗಲೇ ಶಾಲ್ಮಲಿ ಶರೀರದಲ್ಲಿ ತ್ರಾಣವಿಲ್ಲದಂತಿದ್ದಳು. ಆನೆಮಹಲಿಗೆ ಬಂದ ಮೂರನೆಯ ದಿನ ಒಂದು ಸಂಜೆ ಮೈಯಲ್ಲಿ ಹುಷಾರಿಲ್ಲ ಎಂದು ಮಲಗಿಕೊಂಡಿದ್ದ ಶಾಲ್ಮಲಿಯ ಮೈ ಮುಟ್ಟಿ ನೋಡಿದಾಗ ಮೈ ತುಂಬಾ ಬಿಸಿಯಾಗಿರುವುದನ್ನು ಕಂಡು, ಅಭಿ ಸುಕೃತಿಗೆ ವಿಷಯ ತಿಳಿಸಿ ಕಾರಿನಲ್ಲಿ ಶಾಲ್ಮಲಿಯನ್ನು ಮೂರು ಕಿಲೋಮೀಟರ್ ದೂರದಲ್ಲಿ ಸಕಲೇಶಪುರದಲ್ಲಿದ್ದ ಆಸ್ಪತ್ರೆಗೆ ಕರೆದುಕೊಂಡು ಹೋದ.

ಶಾಲ್ಮಲಿಯನ್ನು ಪರೀಕ್ಷಿಸಿದ ಡಾಕ್ಟರ್, 'ಮಲೇರಿಯಾ ಅಂತನಿಸುತ್ತೆ. ಅಡ್ಮಿಟ್ ಮಾಡಿಕೊಳ್ಳುತ್ತೇವೆ. ಶರೀರದಲ್ಲಿ ಏನೇನೂ ತ್ರಾಣವಿಲ್ಲ. ಡ್ರಿಪ್ ಹಾಕುತ್ತೇವೆ. ಆಸ್ಪತ್ರೆಯಲ್ಲಿ ಕೆಲವು ದಿನ ಇರಬೇಕಾಗುತ್ತೆ' ಎಂದರು. ಪರೀಕ್ಷೆಯಲ್ಲಿ ಮಲೇರಿಯಾ ಎನ್ನುವುದು ದೃಢಪಟ್ಟಿತು. ಆಸ್ಪತ್ರೆಯಲ್ಲಿ ಅಮ್ಮನ ಜೊತೆ ಇರಲು ಅಭಿ ಮತ್ತು ಸುಕೃತಿ ಬಂದರು.

ಅಮ್ಮ ಗುಣಮುಖಳಾಗಿ ಎದ್ದು ಓಡಾಡುವಂತಾಗಲು ಒಂದು ವಾರ ಬೇಕಾಯಿತು. ಯಾವಾಗ ಅಮೆರಿಕೆಗೆ ಹೋಗಲಿಲ್ಲ ಎಂಬ ಅಸಹನೆಯೋ ಆತಂಕವೋ ದುಗುಡವೋ ಸುಕೃತಿಯ ಮುಖದಲ್ಲಿ ಎದ್ದು ಕಾಣಿಸುತ್ತಿತ್ತು ಅಭಿಗೆ. ಅಂತೂ ಕೊನೆಗೆ ಸುಕೃತಿ ಅಮೆರಿಕೆಗೆ ಹೊರಟು ನಿಂತಾಗ ಅಪ್ಪ ಅಮ್ಮನ ಕಣ್ಣಲ್ಲಿ ಸುರಿದ ಕಣ್ಣೀರನ್ನು ಅವಳು ಕಾಣಲಿಲ್ಲ. ಅಣ್ಣನ ಕಣ್ಣಲ್ಲಿ ಸುರಿದ ಕಣ್ಣೀರನ್ನು ಸಹ ಕಾಣಲಿಲ್ಲ. ಅಂತೂ ಅಮ್ಮ ಈಗ ಹುಷಾರಾಗಿದ್ದಾಳೆ ಎಂದು ತನ್ನೊಳಗೆ ತನಗೇ ಸಮಜಾಯಿಸಿ ಮಾಡಿಕೊಂಡು ಸುಕೃತಿ ಅಮೆರಿಕೆಗೆ ಹೊರಟುಹೋದಳು.

12

ಅಭಿ ಅನಂತರ ಮೂರು ವಾರ ಅಪ್ಪ ಅಮ್ಮನ ಜೊತೆಯಲ್ಲೇ ಕಳೆದು, ಅಮ್ಮ ಚೇತರಿಸಿಕೊಂಡಿರುವುದನ್ನು ಖಾತರಿಪಡಿಸಿಕೊಂಡ ಮೇಲೆ ಅಮೆರಿಕೆಗೆ ಹೋದ. ಹೋಗುವ ಮೊದಲು ಅಪ್ಪ ಅಮ್ಮನ ಬಳಿ ಕುಳಿತು ತನ್ನ ಮುಂದಿನ ಬದುಕಿನ ನಕ್ಷೆಯನ್ನು ಬಿಚ್ಚಿದ. 'ನೀವು ಇಬ್ಬರೂ ನಾನು ಹೇಳುವುದನ್ನು ಪ್ರೀತಿಯಿಂದ, ಸಮಾಧಾನದಿಂದ ಕೇಳಬೇಕು. ನೊಂದುಕೊಳ್ಳಬಾರದು. ನಾನು ಹೇಳುವುದರಲ್ಲಿರುವ ಸತ್ಯವನ್ನು ಸ್ವೀಕರಿಸಲು ನೀವು ಸಿದ್ಧರಾಗಿರಬೇಕು' ಎಂದು ತುಸು ತಡೆದು, 'ಈ ಬದುಕು ಎಂಬುದಕ್ಕೆ ಏನು ಅರ್ಥ ಅಂತ ನನಗೆ ಏನೇನೂ ಅರ್ಥವಾಗಿಲ್ಲ. ಅರ್ಥ ಮಾಡಿಕೊಳ್ಳದೆ ಬದುಕಬೇಕು ಅಂದುಕೊಂಡಿದ್ದೇನೆ. ನಾವು ನಾಲ್ವರು ಒಂದೇ ಗೂಡಿನಲ್ಲಿರುವ ಪಕ್ಷಿಗಳಂತೆ ಜೀವಿಸಬೇಕೆಂಬುದು ಅಪ್ಪನ ಆಸೆ, ಆಕಾಂಕ್ಷೆ. ಆದರೆ ಯಾವ ಮನುಷ್ಯನಿಂದಲೂ ಆಸೆ ಆಕಾಂಕ್ಷೆಯ ಬಲದಿಂದ ಜೀವಿಸಲು ಸಾಧ್ಯವಿಲ್ಲ. ನೀವು ಇಬ್ಬರೂ ನನ್ನ ಮತ್ತು ಸುಕೃತಿಯ ಬಗ್ಗೆ ಯೋಚಿಸಬಾರದು. ನಾನು ಮದುವೆ ಆಗುತ್ತೇನೋ ಇಲ್ಲವೋ ಈಗಲೇ ಹೇಳಲಾರೆ. ಆದ್ದರಿಂದ ಆ ಕುರಿತು ನಾನು ನಿರ್ಧರಿಸುವವರೆಗೆ ಆ ವಿಚಾರವನ್ನು ಮರೆತುಬಿಡಿ. ಇನ್ನು ಸುಕೃತಿಯ ವಿಚಾರ. ಬೇರೆ ವಿಧಿಯಿಲ್ಲದೆ ನನಗೆ ಅವಳ ಬಗ್ಗೆ ತಿಳಿದಿರುವ ಸತ್ಯವೊಂದನ್ನು ನಾನು ನಿಮಗೆ ಹೇಳಲೇ ಬೇಕು. ಆ ಸತ್ಯದ ಬೆಂಕಿ ನಿಮ್ಮನ್ನು ತಟ್ಟಬಾರದು' ಎಂದು ಸ್ವಲ್ಪ ತಡೆದು, 'ಸುಕೃತಿ ಇಷ್ಟರಲ್ಲೇ ಅಮೆರಿಕೆಯಿಂದ ಚೆನ್ನೈಗೆ ಹೋಗಿರುತ್ತಾಳೆ. ಯಾಕೆಂದರೆ, ಸುಕೃತಿ ಮತ್ತು ಅಮೆರಿಕೆಯಲ್ಲಿ ಅವಳ ಸಹೋದ್ಯೋಗಿಯಾಗಿರುವ ಕರುಣಾನಿಧಿ ಎಂಬ ಹುಡುಗ ಪರಸ್ಪರ ಪ್ರೀತಿಸುತ್ತಿದ್ದಾರೆ. ಅವನು ಚೆನ್ನೈಯವನು. ಕರುಣಾನಿಧಿ ತಮಿಳು ಮಾತಾಡುವವನು. ಬುದ್ಧಿವಂತ, ಒಳ್ಳೆಯ ದೇಹದಾರ್ಢ್ಯವಿದ್ದು, ಸುಂದರವಾಗಿದ್ದಾನೆ. ಚೆನ್ನೈಯಲ್ಲಿ ಸುಕೃತಿ ಮತ್ತು ಕರುಣಾನಿಧಿಯ ಮದುವೆ ಇಷ್ಟರಲ್ಲೇ ನಡೆದಿದ್ದರೆ ನನಗೆ ಆಶ್ಚರ್ಯವಾಗುವುದಿಲ್ಲ. ನೀವು ದುಃಖಿಸಬಾರದು. ನನಗಿಂತ ಚೆನ್ನಾಗಿ ನಿಮಗೆ ಭೂಮಿ ಮೇಲೆ ಮನುಷ್ಯರು ಯಾವ ರೀತಿಯಲ್ಲಿ ಜೀವಿಸುತ್ತಿದ್ದಾರೆ ಎಂದು ತಿಳಿದಿದೆ. ಕೋಟ್ಯಂತರ ಮನುಷ್ಯರು ಕೋಟ್ಯಂತರ ರೀತಿಯಲ್ಲಿ ಜೀವಿಸುತ್ತಿದ್ದಾರೆ, ಒಬ್ಬನ ಬದುಕು ಇನ್ನೊಬ್ಬನ ಬದುಕಿನಂತಿಲ್ಲ. ಯಾಕೆಂದರೆ ಒಬ್ಬನ ಮನಸ್ಸು ಇನ್ನೊಬ್ಬನ ಮನಸ್ಸಿನಂತಿಲ್ಲ, ಹಾಗಿರಲು ಸಾಧ್ಯವೂ ಇಲ್ಲ. ಏನಾದರೂ ಮಾತಾಡಬೇಕು ಎಂದು ಸುಮ್ಮನೆ ಇಷ್ಟು ಮಾತಾಡಬೇಕೆಂದು ಹಲುಬಿದೆ ಅಷ್ಟೆ' ಎಂದು ನಕ್ಕು, ಅಭಿ, ಈಗ ನಾನು ಇನ್ನು ಏನೂ ಹೇಳುವುದಿಲ್ಲ. ಸತ್ಯ ಕಹಿಯೂ ಅಲ್ಲ; ಸಿಹಿಯೂ ಅಲ್ಲ. ಹೇಗಿದ್ದರೂ ಅದನ್ನು ಜೀರ್ಣಿಸಿಕೊಳ್ಳಲೇ ಬೇಕು ಎಂದು ಮಾತ್ರ ನಾನು ಅರ್ಥ ಮಾಡಿಕೊಂಡಿದ್ದೇನೆ' ಎಂದ.

ಪ್ರೀತಿಯ ಸಾಗರವೇ ಆಗಿರುವ ಅಪ್ಪನ ಕಣ್ಣಿನಲ್ಲಿ ಒಂದು ಹನಿ ಕಣ್ಣೀರು ಕೂಡ ಕಾಣಿಸಲಿಲ್ಲ. ಅಪ್ಪನ ಮೌನ ಮತ್ತು ನಿರ್ಲಿಪ್ತತೆ ಅಭಿಗೆ ಹೊಸದೇನೂ ಆಗಿರಲಿಲ್ಲ. ಆದರೆ ಅಮ್ಮನ ಮುಖವನ್ನು ನೋಡಲು ಅವನಿಗೆ ಕಷ್ಟವಾಯಿತು. ಆದರೂ ಅಭಿ ಮಾತಾಡಿದ, 'ಯಾವತ್ತೋ ಒಂದು ದಿನ ನಾವು ಒಬ್ಬರನ್ನೊಬ್ಬರು ಅಗಲಲೇ ಬೇಕಾಗುತ್ತದೆ. ಅಗಲುವುದನ್ನು ಕಳೆದುಕೊಳ್ಳುವುದು ಎಂದು ಭಾವಿಸಿದರೆ ದುಃಖದ ಗಾತ್ರ ಇನ್ನಷ್ಟು ಹೆಚ್ಚಾಗುತ್ತದೆ. ಆದ್ದರಿಂದ ಅಗಲುವಿಕೆಗೆ ನಾವು ಸದಾ ಸಿದ್ಧರಾಗಿರಬೇಕು ಎಂದು ನನಗೆ ಅನಿಸುತ್ತದೆ' ಎಂದು ಸ್ವಲ್ಪ ತಡೆದು, 'ಅಮ್ಮಾ, ನೀನು ವಿಶ್ರಾಂತಿ ತೆಗೆದುಕೊ. ನಾಳೆ ಮಾತಾಡೋಣ. ಅಪ್ಪನ ಬಳಿ ನನಗೆ ತುಂಬಾ ಮಾತಾಡಲಿಕ್ಕಿದೆ' ಎಂದ.

ಮರುದಿನ ಮಹಡಿಯ ಒಂದು ಕೋಣೆಯಲ್ಲಿ ಅಪ್ಪನ ಜೊತೆ ಅಭಿ ಮಾತಿಗೆ ಕುಳಿತ. ಒಂದು ವಿಲಕ್ಷಣವಾದ ಪ್ರಶ್ನೆಯೊಂದಿಗೆ ಮಾತು ಆರಂಭಿಸಿದ 'ಅಪ್ಪಾ, ಹೂವಿನಿಂದಾರಂಭವಾಗಿ ನಿಸರ್ಗದಲ್ಲಿರುವ ಅನಿಮೇಟ್ ಇನಾನಿಮೇಟ್ ಎಲ್ಲದರಲ್ಲಿಯೂ ಅದರದೇ ಆದ ಸೌಂದರ್ಯ ಎನ್ನುವುದು ಇದೆ. ನಾನು ಕೇಳುತ್ತಿರುವ ಪ್ರಶ್ನೆ ಏನೆಂದರೆ, ಸೌಂದರ್ಯ ಎನ್ನುವುದು

## ಬಾಳಸಂಜೆ

ಮುಂಜಾನೆ ಸಂಜೆಯಾಗುವುದು
ತಡವೇನಿಲ್ಲ
ಬಾಳಸಂಜೆಯ ಪಯಣಿಗರ
ಮನ ನೋಯಿಸುವುದು
ಖಂಡಿತಾ
ತರವಲ್ಲ..

★ ಡಾ. ವಿನಯ ಶ್ರೀನಿವಾಸ್

